

ಕಡೆಯ ದಿನಗಳ ವೇಳೆಗೆ ನಿಧಾನಕ್ಕೆ ಮಾವಿನ ಮುಡಿಗೆ ಏರುತ್ತವೆ. ಎಂಥ ದುಗುಡವನ್ನೂ ಹೊಡೆದೋಡಿಸುವ ಜೀವನೋತ್ಸಾಹ ಹೆಚ್ಚಿಸುವ ಮಾಯೆ– ಚಿಗುರಿ ಹೂ ಬಿಟ್ಟ ಮಾವಿಗಿದೆ. ಲಕ್ಷಾಂತರ ಹೂಗಳಿದ್ದರೂ ಗೊಂಚಲೊಳಗೆ ನಾಲ್ಕೈದು ಕಾಯಿ ಜೀವ ತಳೆದು ಬಣ್ಣಗಟ್ಟುವ ಹಣ್ಣುಗಳಿಗಿವೆ. ಹೂವುಗಳೆಲ್ಲವೂ ಕಾಯಿ ಕಟ್ಟಲೆಂದು, ಹಣ್ಣಿಗೆ ಹೂಜಿ ಬೀಳದಿರಲೆಂದು ಸುರಿವ ಔಷಧಿಯು ಜೇನಿನ ಸಂಕುಲಕ್ಕೆ ಮರ್ಮಾಘಾತ ನೀಡುತ್ತಿದ್ದರೂ ಸಹ ಅವು ಇಂದು ಹೇಗೊ ಬದುಕಿ ಉಳಿದಿವೆ.

ರಸಪುರಿ, ಬಾದಾಮಿ, ಮಲಗೋಬ, ಸೇಂದೂರ, ಮಲ್ಲಿಕ, ತೋತಾಪುರಿ, ಕೊಬ್ಬರಿ ಮಾವು, ಜೀರಿಗೆ ಮಾವು, ಕಿತ್ತಳೆ ಘಮಲಿನ ಹಣ್ಣುಗಳು. ಕಸಿ ಮಾಡದ ತರಾವರಿ ನಾಟಿ ಹಣ್ಣುಗಳು. ಮಣ್ಣಿಗೆ ಮಾತ್ರವೇ ರುಚಿ ನಿರ್ಧರಿಸುವ ಶಕ್ತಿ ಇರೋದಿಲ್ಲ. ತಳಿಗೂ ಇರುತ್ತದೆ. ಹಲಸು ಈ ವಾದಕ್ಕೆ ತುಸು ವಿರೋಧಿ. ಹಲಸಿನ ರುಚಿಯ ಹಿಂದೆ ತಳಿಯಷ್ಟೆ ಮಣ್ಣಿನ ಪಾತ್ರ ಬಹು ದೊಡ್ಡದು. ಆದರೂ ಒಂದೇ ಟಾಕಿನ ಮಣ್ಣನೊಳಗೆ ನೆಟ್ಟ ಜಾತಿ ಜಾತಿಯ ಮಾವುಗಳು ಹುಳಿ, ಸಿಹಿ, ನಾರು, ವಾಟೆ ದಪ್ಪ, ಸಣ್ಣ ಹೀಗೆ... ಹಲಸು ಕೂಡ